ಮುಂಜಾವು

ವಾರಪತ್ರಿಕೆ.

ಸಂಪಾದಕ: ಸಿರಿಮನೆ ನಾಗರಾಜ್

'MUNJAVU' Kannada Weekly, KOPPA-CHM. ಫೋನ್ : 114

8ನೇ ವರ್ಷ 34ನೇ ಸಂಚಿಕೆ ಕೊಪ್ಪ 29-4-1990 ಭಾನುವಾರ ಬೆಲೆ 60 ಪೈಸೆ

ಸಿಂಡಿಕೇಟ್ ಬ್ಯಾಂಕ್ ಅಧಿಕಾರಿಗಳ ಮುಷ್ಕರ

ಸಿಂಡಿಕೇಟ್ ಬ್ಯಾಂಕ್ ಉನ್ನತ ಆಡಳಿತ ವರ್ಗದ ಭ್ರಷ್ಟಾಚಾರ ಮತ್ತು ದುಂದುಗಾರಿಕೆ ವಿರುದ್ಧ ಬ್ಯಾಂಕ್ ಅಧಿಕಾರಿಗಳು ಏ. 25 ರಂದು ದೇಶಾದ್ಯಂತ ಮುಷ್ಕರ ನಡೆಸಿದರು.

ಈ ಭ್ರಷ್ಟತೆ ಮತ್ತು ದುಂದನ್ನು ತಮ್ಮ ಸಂಘ ವಿರೋಧಿಸಿದ್ದಕ್ಕೆ ಸಂಘವನ್ನೇ ಒಡೆಯುವ ತಂತ್ರವನ್ನು ಆಡಳಿತ ವರ್ಗ ಕೈಗೊಂಡಿದ್ದನ್ನೂ, ಸಂಘದ ಪದಾಧಿಕಾರಿಗಳ ಅವಮಾನತು-ಬಂಧನಗಳಂಥ ಕಾರ್ಮಿಕ ವಿರೋಧಿ ನೀತಿಯನ್ನೂ ಸಹ ಅಧಿಕಾರಿಗಳ ಈ ಮುಷ್ಕರ ವಿರೋಧಿಸಿತು.

ಕೊಪ್ಪ, ಶೃಂಗೇರಿ, ನ. ರಾ. ಪುರಗಳ ಎಲ್ಲ ಸಿಂಡಿಕೇಟ್ ಬ್ಯಾಂಕ್ ಶಾಖೆಗಳಲ್ಲೂ ಮುಷ್ಕರ ಯಶಸ್ವಿಯಾಗಿದ್ದು, ಈ ಮುಷ್ಕರಕ್ಕೆ ಬ್ಯಾಂಕಿನ ನೌಕರರ ಸಂಘವೂ ಬೆಂಬಲ ನೀಡಿತ್ತು ಎಂದು ಸಂಘದ ಪ್ರತಿನಿಧಿಗಳು ತಿಳಿಸಿದ್ದಾರೆ.

ಜವಾಹರ್ ರೋಜ್‌ಗಾರ್ : ಜಿ. ಪ. ಇಂಜಿನಿಯರ್ ಚ್ಯುತಿಯಿಂದ

ಕಿಗ್ಗ ಮಂಡಲಕ್ಕೆ 85000 ರೂ. ದ್ವಿಮುಖ ನಷ್ಟ

(ವರದಿ : ಕಲ್ಕುಳಿ ವಿಠಲ ಹೆಗ್ಡೆ)

ಶೃಂಗೇರಿ : ಈ ತಾಲ್ಲೂಕಿನ ಮರ್ಕಲ್ (ಕಿಗ್ಗ) ಮಂಡಲ ಪಂಚಾಯಿತಿ ಮತ್ತು ಶೃಂಗೇರಿಯ ಜಿ. ಪ. ಇಂಜಿನಿಯರ್ ಜಯದೇವಮೂರ್ತಿ ನಡುವೆ ಹೊಂದಾಣಿಕೆಯಿಲ್ಲದ್ದರಿಂದಾಗಿ, ಜವಾಹರ್ ರೋಜ್‌ಗಾರ್ ಯೋಜನೆಯಲ್ಲಿ ಪಂಚಾಯಿತಿಗೆ ಮಂಜೂರಾಗಿದ್ದ ಕಾಮಗಾರಿಯೊಂದರ 28 ಸಾವಿರ ರೂ.ಗೂ ಹೆಚ್ಚು ಹಣ 'ಲ್ಯಾಪ್ಸ್' ಆಗಿದೆ

ಈ 28 ಸಾವಿರ ಬಳಕೆಯಾಗಿದ್ದಲ್ಲಿ ಮುಂದಿನ ವರ್ಷಕ್ಕೆ ಇದರ ದುಪ್ಪಟ್ಟು ಹಣ (ಸುಮಾರು 57 ಸಾವಿರ ರೂ.) ಮಂಜೂರಾಗುತ್ತಿತ್ತು. ಈ 'ಲ್ಯಾಪ್ಸ್'ನಿಂದಾಗಿ ಅದೂ ಕೂಡ ಕೈ ತಪ್ಪಿ ಹೋಗಲಿದೆ. ಇದರಿಂದ ಮಂಡಲಕ್ಕೆ ಒಟ್ಟು ಸುಮಾರು 85 ಸಾವಿರ ರೂ. ನಷ್ಟವಾದಂತಾಗಿದೆ.

ಈಗಾಗಲೇ ಅರ್ಧ ಆಗಿರುವ ಈ ಕಾಮಗಾರಿಗೆ ಈಗ ಮಂಡಲದವರೇ ಹಣ ಪಾವತಿಸಬೇಕಾಗಿದೆಯಲ್ಲದೆ, ಆಗಿರುವಷ್ಟು ಕೆಲಸ ವ್ಯರ್ಥವಾಗಬಾರದೆಂದಿದ್ದಲ್ಲಿ ಅದನ್ನು ಮಂಡಲದ ಖರ್ಚಲ್ಲೇ ಪೂರ್ಣಗೊಳಿಸಬೇಕಾಗಿದೆ.

ಮಾರ್ಚ್ ಕೊನೆಯೊಳಗೆ ಪೂರ್ತಿ ಹಣವನ್ನು 'ಡ್ರಾ' ಮಾಡಿ ಕಾಮಗಾರಿ ಪೂರ್ಣಗೊಳಿಸಬಹುದಿತ್ತಾದರೂ ಇಂಜಿನಿಯರ್ ಅವರು ಈ ಬಗ್ಗೆ ಆಸ್ಥೆ ವಹಿಸದೆ, ತಾ. ಪಂ. ಸಮಿತಿಗೂ ತಿಳಿಸದೆ ಈ ರೀತಿ ಸಾರ್ವಜನಿಕ ನಷ್ಟಕ್ಕೆ ಕಾರಣರಾದ ಬಗ್ಗೆ ಕಳೆದ ತಾ. ಪಂ. ಸಮಿತಿ ಸಭೆಯಲ್ಲಿ ಮಂಡಲ ಸದಸ್ಯರು ಆಕ್ರೋಶ ವ್ಯಕ್ತಪಡಿಸಿದರು.

ಏಲಕ್ಕಿ ನಿಗಮದಿಂದ ಸುಗ್ಗಿ ಖರೀದಿ ಅಂತ್ಯ

ಕೊಪ್ಪ : ಈ ವರ್ಷದ ಏಲಕ್ಕಿ ಸುಗ್ಗಿಯ ಕಾಲ ಮುಗಿದಿದ್ದು, ಸಾಕಷ್ಟು ಪ್ರಮಾಣದಲ್ಲಿ ಮಾಲು ಬರುತ್ತಿಲ್ಲವಾದ ಕಾರಣ ಏಲಕ್ಕಿ ವ್ಯಾಪಾರ ನಿಗಮದವರು ಕೊಪ್ಪದಲ್ಲಿ ನಡೆಸುತ್ತಿದ್ದ ಸುಗ್ಗಿ ಕಾಲದ ವ್ಯಾಪಾರವನ್ನು ಮುಕ್ತಾಯಗೊಳಿಸಿರುವುದಾಗಿ ನಿಗಮದ ಡಿಪೋ ಮ್ಯಾನೇಜರ್ ಎ. ಪಿ. ವೆಂಕಟೇಶ್ ತಿಳಿಸಿದ್ದಾರೆ.

ಅನಾನುಕೂಲಕ್ಕೆ ವಿಷಾದ

ವಾರ್ಷಿಕ ಲೆಕ್ಕ ಪತ್ರ ಮುಕ್ತಾಯದ ಕೆಲಸದ ಒತ್ತಡದಿಂದಾಗಿ ಏ. 7 ರಂದು ಕೊಪ್ಪದಲ್ಲಿ ವ್ಯಾಪಾರ ಏರ್ಪಡಿಸಲಾಗದೆ ಬೆಳೆಗಾರರಿಗೆ ತೊಂದರೆಯುಂಟಾದುದಕ್ಕೆ ಅವರು ವಿಷಾದ ವ್ಯಕ್ತಪಡಿಸಿದ್ದಾರೆ

ರಾಜ್ಯ ಯುವ ಮೇಳದಲ್ಲಿ ಗಣೇಶ ಹಂದೆಗೆ ಪ್ರಶಸ್ತಿ

ಬೆಳಗಾವಿ ಜಿಲ್ಲೆಯಲ್ಲಿ ನಡೆದ ರಾಜ್ಯ ಮಟ್ಟದ ಯುವಜನ ಮೇಳದಲ್ಲಿ ಮೈಸೂರು ವಿಭಾಗವನ್ನು ಪ್ರತಿನಿಧಿಸಿದ್ದ ಕೊಪ್ಪ ಸರ್ವೋದಯ ಯುವಕ ಸಂಘದ ಗಣೇಶ ಹಂದೆ ಭಾವಗೀತೆ ಸ್ಪರ್ಧೆಯಲ್ಲಿ ಮೊದಲ ಬಹುಮಾನ ಗಳಿಸಿದ್ದಾರೆ.

ಈ ಮೇಳದಲ್ಲಿ ಮೈಸೂರು ವಿಭಾಗಕ್ಕೆ ವೈಯಕ್ತಿಕ ಚಾಂಪಿಯನ್ ಶಿಪ್ ಸಹ ಲಭಿಸಿದೆ.

ಕೊಪ್ಪ ಸವಿತಾ ಸಮಾಜದ ಪದಾಧಿಕಾರಿಗಳು

ಕೆ. ಎನ್. ಕೃಷ್ಣ ಭಂಡಾರಿ (ಅಧ್ಯಕ್ಷರು), ಸುಂದರ್ ಭಂಡಾರಿ (ಉಪಾಧ್ಯಕ್ಷ), ಗೋಪಾಲ್ ಗೋಯಲ್ (ಕಾರ್ಯದರ್ಶಿ), ರತ್ನಾಕರ್ (ಉಪ ಕಾರ್ಯದರ್ಶಿ), ರಘು ಭಂಡಾರಿ (ಸಂಘಟನಾ ಕಾರ್ಯದರ್ಶಿ), ವಿಜಯ ಭಂಡಾರಿ (ಖಜಾಂಚಿ), ಮಾಂಗಿಲಾಲ್ ಲಕ್ಷ್ಮಣಲಾಲ್, ಅಂಬಾಲಾಲ್ ಮತ್ತು ವಿಠಲ ಭಂಡಾರಿ (ಸಂಚಾಲಕರು).

ಇಂಡಿಯನ್ ಬ್ಯಾಂಕಿಗೆ ಉನ್ನತಾಧಿಕಾರಿ ಭೇಟಿ

ಕೊಪ್ಪ : ಇಲ್ಲಿನ ಇಂಡಿಯನ್ ಬ್ಯಾಂಕ್ ಬೆಂಗಳೂರು ಪ್ರಾದೇಶಿಕ ಕಛೇರಿ ವ್ಯಾಪ್ತಿಯ ಗ್ರಾಮಾಂತರ ಶಾಖೆಗಳ ಪೈಕಿ 'ಮಾದರಿ ಶಾಖೆ' ಎಂಬ ಹೆಗ್ಗಳಿಕೆಗೆ ಪಾತ್ರವಾಗಿರುವ ಹಿನ್ನೆಲೆಯಲ್ಲಿ ಬ್ಯಾಂಕಿನ ಕಾರ್ಯನಿರ್ವಾಹಕ ನಿರ್ದೇಶಕ ಬಿ. ಬಿ. ಶೆಟ್ಟಿ ಏ. 26 ರಂದು ಭೇಟಿ ನೀಡಿದ್ದರು.

ಬ್ಯಾಂಕಿನ ಕಾರ್ಯ ಚಟುವಟಿಕೆಗಳನ್ನು ಪರಿಶೀಲಿಸಿದ ಅವರು ಬ್ಯಾಂಕಿನ ಗ್ರಾಹಕರನ್ನು ಭೇಟಿ ಮಾಡಿ ವಿಚಾರ ವಿನಿಮಯ ನಡೆಸಿದರಲ್ಲದೆ, ಮುಂದೆಯೂ ಗ್ರಾಹಕರ ಸಹಕಾರ ಕೋರಿ, ಬ್ಯಾಂಕ್ ವತಿಯಿಂದ ಸಂಪೂರ್ಣ ಸಹಕಾರದ ಭರವಸೆ ನೀಡಿದರು.

ಒಂದೂವರೆ ವರ್ಷದಿಂದ ಕೆಲಸಕ್ಕೆ ಹಾಜರಾಗದೆ ಜಿಲ್ಲಾ ಕೇಂದ್ರದಿಂದಲೇ ಸಂಬಳ ಪಡೆವ ಅಧಿಕಾರಿ!

ಕೊಪ್ಪ : ಈ ತಾಲ್ಲೂಕಿನ ಸಹಕಾರ ಸಂಘಗಳ 'ಸಹಕಾರ ಅಭಿವೃದ್ಧಿ ಅಧಿಕಾರಿ' ಎಂಬೊಬ್ಬ ಬೃಹಸ್ಪತಿ ಒಂದೂವರೆ ವರ್ಷದಿಂದಲೂ ಚಿಕ್ಕಮಗಳೂರಿನಲ್ಲೇ ಸಂಬಳ ಪಡೆದು ಊರಲ್ಲಿ ಹಾಯಾಗಿದ್ದಾರೆಂದು ಹೇಳಲಾಗಿದೆ.

ತಾಲ್ಲೂಕಿನ ಎಲ್ಲಾ ರೀತಿಯ ಸಹಕಾರ ಸಂಘಗಳಿಗೂ ತಾ॥ ಮಟ್ಟದಲ್ಲಿ ಉನ್ನತಾಧಿಕಾರದ ಈ ಹುದ್ದೆಯಲ್ಲಿ ಈತ ಕೆಲವು ಕಾಲ ಕೆಲಸ ನಿರ್ವಹಿಸಿದ್ದು, ಒಂದೂವರೆ ವರ್ಷದ ಹಿಂದೆ ಊರಿಗೆ ಹೋದವರು ತಿರುಗಿ ಬಂದಿಲ್ಲ ಎನ್ನಲಾಗಿದೆ.

ಪ್ರತಿ ತಿಂಗಳೂ ಇವರು ಚಿಕ್ಕಮಗಳೂರಿನಲ್ಲಿರುವ ಜಿಲ್ಲಾ ಕೇಂದ್ರ ಕಛೇರಿಗೆ ಬಂದು 3-4 ಸಾವಿರ ರೂ. ಸಂಬಳ ಪಡೆದು ಹೊರಟು ಹೋಗುತ್ತಿದ್ದರೂ ಇವರನ್ನು ಯಾರೂ ವಿಚಾರಿಸುತ್ತಿಲ್ಲವೆನ್ನಲಾಗಿದೆ. ಕೊಪ್ಪ ತಾ. ಪಂ ಸಮಿತಿ ಸಭೆಯೂ ಈತನ ಈ ಸುದೀರ್ಘ ಗೈರು ಹಾಜರಿಯನ್ನು ಗಮನಿಸಿಲ್ಲವೆಂಬುದು ಆಶ್ಚರ್ಯ.

ಚಿಕ್ಕಮಗಳೂರಿನಲ್ಲಿ ಬಹು ಸ್ವಲ್ಪ ಕಾಲ ಸಹಕಾರ ಸಂಘಗಳ ಡೆಪ್ಯುಟಿ ರಜಿಸ್ಟ್ರಾರ್ ಆಗಿದ್ದು, ಜಿಲ್ಲೆಯ 'ಮುಳುಗಡೆ' ಸಹಕಾರ ಸಂಘಗಳನ್ನೆಲ್ಲ ದುರಸ್ತಿಗೊಳಿಸಲು ಯತ್ನಿಸಿದ ಹುಚ್ಚಾಚಾರ್‌ರನ್ನು ಅಂಥ ಎಲ್ಲ ಸಂಘಗಳ 'ಸುಂಗಪ್ಪ'ಗಳೂ ಉನ್ನತ ಮಟ್ಟದಲ್ಲಿ ಮಸಲತ್ತು ನಡೆಸಿ ವರ್ಗಾವಣೆ ಮಾಡಿ ಸಾಗ ಹಾಕಿದ ಮೇಲೆ, ಈಗ ಮೇಲೆ ತಿಳಿಸಿದಂಥ ಗೈರು ಹಾಜರಿ ಅಧಿಕಾರಿಗಳಿಗೆಲ್ಲ ಈಗಿರುವ ಡೆಪ್ಯುಟಿ/ಅಸಿಸ್ಟೆಂಟ್ ರಿಜಿಸ್ಟ್ರಾರ್‌ಗಳದೇ ಶ್ರೀರಕ್ಷೆ ಎಂದು ತಿಳಿದು ಬರುತ್ತದೆ.

ಅದಕ್ಕನೂ ಆದ ಈ ಅಭಿವೃದ್ಧಿ ಅಧಿಕಾರಿಗೆ ಬೇಕಿದ್ದರೆ ಮೈಸೂರಿನ ಅವರ ಮನೆಗೇ ಸಂಬಳ ಕಳಿಸಿಕೊಡಲಿ. ಆದರೆ ಕೊಪ್ಪ ತಾಲ್ಲೂಕಿಗೆ ಒಬ್ಬ ದಕ್ಷ ಅಧಿಕಾರಿಯನ್ನು ನೇಮಿಸಲಿ ಎಂದು ತಾಲ್ಲೂಕಿನ ಸಹಕಾರಿಗಳು ಒತ್ತಾಯಿಸಿದ್ದಾರೆ.

ಮಗುವನ್ನು ಹೊಳೆಗೆಸೆದ ತಂದೆ

ಬಂಡಿಗಡಿ : ಇಲ್ಲಿಗೆ ಸಮೀಪದ ಹಳ್ಳಿಯೊಂದರ ವ್ಯಕ್ತಿಯೊಬ್ಬ ತೀರ್ಥಹಳ್ಳಿ ತಾಲ್ಲೂಕಿನಿಂದ ಕಳೆದ ವರ್ಷ ಮದುವೆಯಾಗಿದ್ದು, ಮಗು ಹುಟ್ಟಿದಾಗ ತನ್ನ ಪತ್ನಿಯ ಶೀಲ ಶಂಕಿಸಿ ಆಕೆಯನ್ನು [illegible] ನಾದನೆಂದೂ ಹಿಕ್ಕೆಸಿಗೆ [illegible] ದ ಪತ್ನಿ-ಮಗುವನ್ನು ವಾಪಸು ಕರೆ ತಂದರೂ ಸಹ ದಾರಿಯಲ್ಲಿ ಬರುವಾಗ [illegible] ಸೇತುವೆ ಬಳಿ ಮಗುವನ್ನು ಹೊಳೆಗೆಸೆದನೆಂದೂ, 3 ದಿನಗಳ ನಂತರ ಹೊಳೆಯಲ್ಲಿ ತೇಲಿದ ಮಗುವಿನ ಕಳೇಬರ ಕಂಡು ಗ್ರಾಮಸ್ಥರು ದೂರು ನೀಡಿದ ಮೇರೆಗೆ ತೀರ್ಥಹಳ್ಳಿ ಪೊಲೀಸರು ತನಿಖೆ ನಡೆಸಿ ಆ ವ್ಯಕ್ತಿಯನ್ನು ಬಂಧಿಸಿ ಮುಂದಿನ ಕ್ರಮ ಕೈಗೊಂಡಿರುವುದಾಗಿಯೂ ತಿಳಿದು ಬಂದಿದೆ

ಶೃಂಗೇರಿಗೆ ಮುಖ್ಯಮಂತ್ರಿಗಳ 'ಸೊನ್ನೆ-ಪ್ಲಸ್' ಭೇಟಿ!

ಸಭೆಯಲ್ಲಿ ಅಧಿಕಾರಿಗಳ ಬಗ್ಗೆ ಸಾಮೂಹಿಕ ಅಸಮಾಧಾನ

ಯಾವುದಾದರೊಂದು ವಸ್ತು ಅಥವಾ ಒಬ್ಬ ವ್ಯಕ್ತಿಯ ದರ್ಜೆ ನಿಷ್ಕರ್ಷೆಯಲ್ಲಿ ಎ, ಬಿ, ಸಿ, ಡಿ, ಎ-ಪ್ಲಸ್, ಬಿ-ಮೈನಸ್ ಮುಂತಾಗಿ ಗುರುತಿಸುತ್ತಾರಷ್ಟೆ.

ಹಾಗೆಯೇ, ಮುಖ್ಯ ಮಂತ್ರಿಯ ಶೃಂಗೇರಿ ಭೇಟಿಯಿಂದ ಶೃಂಗೇರಿಗೆ ದೊರೆತ ಲಾಭ 'ಸೊನ್ನೆ– ಪ್ಲಸ್' ಎನ್ನಬಹುದೆ ?

(ಅಥವಾ ಬೆಂಗಳೂರಿಗೆ ಹಿಂತಿರುಗಿದ ನಂತರ ಯಾವುದಾದರೂ ಪ್ರಮುಖ ಬೇಡಿಕೆ ಬಗ್ಗೆ ಅನುಕೂಲಕರ ತೀರ್ಮಾನ ಕೈಗೊಂಡಾರೊ ? ಅಂಥ ಆಸೆಯೇನೂ ಕಾಣುವುದಿಲ್ಲಪ್ಪ....)

ಶೃಂಗೇರಿಯಲ್ಲಿ ಏ. 16 ರಂದು ಮುಖ್ಯ ಮಂತ್ರಿ ವೀರೇಂದ್ರ ಪಾಟೀಲರು ಮಿನಿ ವಿಧಾನ ಸೌಧ ಕಾರ್ಯಕ್ರಮ ಉದ್ಘಾಟಿಸಿದ ಸಂದರ್ಭದಲ್ಲಿ ಸರ್ಕಾರಿ ಅಧಿಕಾರಿಗಳ ಬಗ್ಗೆ ಸಾಮೂಹಿಕವಾಗಿ ಅಸಮಾಧಾನ ವ್ಯಕ್ತವಾಯಿತು.

ಮುಖ್ಯ ಮಂತ್ರಿಗಳು ತಮ್ಮ ಉದ್ಘಾಟನಾ ಭಾಷಣದಲ್ಲಿ "ಈ ಸುಂದರ ಕಟ್ಟಡವನ್ನು ಇಂದು ಒಳ್ಳೆಯ ಮನಸ್ಸಿನಿಂದ ಉದ್ಘಾಟನೆ ಮಾಡುತ್ತಿದ್ದೇನೆ. ಆದರೆ ಕಟ್ಟಡ ಮಾತ್ರ ಸುಂದರವಾಗಿದ್ದರೆ ಸಾಲದು. ಅದರೊಳಗೆ ನಡೆಯುವ ಕೆಲಸ ಪ್ರಾಮಾಣಿಕವಾಗಿರಬೇಕು. ಇಲ್ಲಿ ಕೆಲಸ ಮಾಡುವ ಅಧಿಕಾರಿಗಳಿಗೆ ಸ್ಥಳೀಯ ಜನರ ನೋವು ಅರ್ಥವಾಗಬೇಕು" ಎಂದು ಅಧಿಕಾರಿಗಳನ್ನು ಚುಚ್ಚಿದರು.

ಇಂದು ತಾಲ್ಲೂಕು ಮಟ್ಟದಲ್ಲಿ ನಡೆಯಬೇಕಾದ ಕೆಲಸಕ್ಕೆ ಜನ ಬೆಂಗಳೂರಿಗೆ ಬರುವಂತಾಗಿದೆ. ಇದು ತಪ್ಪಬೇಕು. ಇಲ್ಲಿಯ ಕೆಲಸ ಇಲ್ಲಿಯೇ ಆಗಬೇಕು. ನಮ್ಮ ಕಛೇರಿಗಳು ಇಂದು ಯಾವ ಸ್ಥಿತಿ ಮುಟ್ಟಿವೆ ಎಂದರೆ, ಇಲ್ಲಿಂದ ಪರ ರಾಷ್ಟ್ರಕ್ಕೆ ಒಂದು ಪತ್ರ ಬರೆದರೆ 8-10 ದಿನದೊಳಗೆ ಉತ್ತರ ಬರುತ್ತದೆ; ಆದರೆ ನಮ್ಮ ಕಛೇರಿಗಳಿಗೆ ಪತ್ರ ಬರೆದರೆ ಒಂದು ವರ್ಷವಾದರೂ ಉತ್ತರ ಸಿಗುವ ಭರವಸೆ ಕಡಿಮೆ ಎಂದರು.

ಯಾವುದೇ ಯೋಜನೆಯ ಕೆಲಸ ಶೀಘ್ರವಾಗಿ ಮುಗಿಯಬೇಕು. ಅದು ತಡವಾದಂತೆಲ್ಲ ಜನರ ಮೇಲೆ ಹೊರೆ ಹೆಚ್ಚಾಗುತ್ತದೆ ಎಂದು, ಈ ಕಟ್ಟಡ ಪೂರ್ಣಗೊಳ್ಳಲು ಐದೂವರೆ ವರ್ಷ ತೆಗೆದುಕೊಂಡಿದ್ದನ್ನು ಪ್ರಸ್ತಾಪಿಸಿದರು.

● ಸಮೀಕ್ಷೆ: ಕಲ್ಕುಳಿ ವಿಠಲ ಹೆಗ್ಡೆ

(ಈ ಬಗ್ಗೆ ಲೋಕೋಪಯೋಗಿ ಅಧಿಕಾರಿಗಳು 'ಮುಂಜಾವು'ಗೆ ನೀಡಿದ ವಿವರಣೆ : ಈ ಕಟ್ಟಡಕ್ಕೆ ಐದೂವರೆ ವರ್ಷದ ಹಿಂದೆ ಟೆಂಡರ್ ಆಯಿತಾದರೂ, ಗುಡ್ಡದ ಮೇಲೆ ಕೆಲಸ ನಿರ್ವಹಿಸುವುದು ದುಬಾರಿಯೆಂಬ ಕಾರಣಕ್ಕೆ ಕಂಟ್ರಾಕ್ಟರ್ ಹಿಂತೆಗೆದುಕೊಂಡರು. ಕೊನೆಗೆ ಟೆಂಡರ್ ಮೌಲ್ಯದ ಮೇಲೆ ಶೇ. 25 ದರ ಹೆಚ್ಚಿಸಿ ಬೇರೆ ಕಂಟ್ರಾಕ್ಟರನ್ನು ಒಪ್ಪಿಸಿದ್ದಾಯಿತು. ಕೆಲಸ ನಡೆದಂತೆ, ಮೂಲ ಡಿಸೈನ್‌ನಲ್ಲಿ ಇಲ್ಲದೆ ಇದ್ದಂತಹ ಕಿಟಕಿ ಸಜ್ಜಾಗಳು (ವಿಧಾನ ಸೌಧದಂತೆಯೇ) ಮತ್ತಿತರ ಅಂದಗಾರಿಕೆಯನ್ನು ಅಳವಡಿಸಲು ಇನ್ನಷ್ಟು ವೆಚ್ಚ ಮತ್ತು ಸಮಯ ಹೆಚ್ಚಾಯಿತು. ಇದರ ಜೊತೆಗೆ ಸಾಮಗ್ರಿಗಳ ಕೊರತೆ, ಬಿಲ್ ಪಾವತಿ ವಿಳಂಬಗಳೂ ಸ್ವಲ್ಪ ಸೇರಿಕೊಂಡವು. ಇಲ್ಲದಿದ್ದಲ್ಲಿ ಬಹುಶಃ ಎರಡು–ಎರಡೂವರೆ ವರ್ಷದಲ್ಲೇ ಕಾಮಗಾರಿ ಮುಗಿಯುತ್ತಿತ್ತು.)

ಸ್ಥಳೀಯ ಬೇಡಿಕೆಗಳನ್ನು ಪ್ರಸ್ತಾಪಿಸಿದ ಮುಖ್ಯ ಮಂತ್ರಿಗಳು, ಸಂಸ್ಕೃತ ವಿಶ್ವವಿದ್ಯಾಲಯ ಸ್ಥಾಪಿಸಲು 6 ಎಕರೆ ಭೂಮಿ ಮಂಜೂರು ಮಾಡುವ ಭರವಸೆ ನೀಡಿ, ಮಿಕ್ಕೆಲ್ಲ ಪ್ರಮುಖ ಬೇಡಿಕೆಗಳನ್ನೂ "ಪರಿಶೀಲಿಸುವ" ಆಶ್ವಾಸನೆ ನೀಡಿದರು.

ಅಧಿಕಾರಿಗಳ ಬಗ್ಗೆ ಮುಖ್ಯ ಮಂತ್ರಿಗಳು ವ್ಯಕ್ತಪಡಿಸಿದ ಅಸಮಾಧಾನದ ಎಳೆಯನ್ನೆತ್ತಿಕೊಂಡ ಕಂದಾಯ ಮಂತ್ರಿ ಅಜೀಜ್ ಸೇಠ್, "ನನ್ನ ಇಲಾಖೆಯಲ್ಲಿ 47 ವರ್ಷಗಳಿಂದ ಉತ್ತರಕ್ಕಾಗಿ ಕಾಯುತ್ತಿರುವ ಅರ್ಜಿಗಳಿವೆ. ಅಧಿಕಾರಿಗಳು ಅವಕ್ಕೆ ಎಂದು ಉತ್ತರಿಸುತ್ತಾರೊ!" ಎಂದು ಛೇಡಿಸಿದರು.

(4ನೇ ಪುಟಕ್ಕೆ)

"ಅಡಿಕೆ ಬೆಳೆಗಾರರ ಸಂಕಷ್ಟಕ್ಕೆ ಸರ್ಕಾರದ ನಿರ್ಲಕ್ಷ್ಯ"

ರೈತರ ಅಸಹಕಾರ ಚಳುವಳಿಗೆ ರಾಮಪ್ಪಯ್ಯ ಕರೆ—

ಶೃಂಗೇರಿ : ಕಳೆದ ಮಳೆಗಾಲದ ಬಿರುಗಾಳಿಯಿಂದ ಬಹಳ ನಷ್ಟ–ಸಂಕಷ್ಟ ಅನುಭವಿಸಿರುವ ಮಲೆನಾಡಿನ ಅಡಿಕೆ ಬೆಳೆಗಾರರಿಗೆ ಮೊನ್ನೆ ವೀರೇಂದ್ರ ಪಾಟೀಲರ ಶೃಂಗೇರಿ ಭೇಟಿ ಏನಾದರೂ ಸ್ವಲ್ಪ ಪರಿಹಾರ ತೋರಿಸೀತೆಂಬ ನಂಬಿಕೆ–ನಿರೀಕ್ಷೆ ವಾತಾವರಣದಲ್ಲಿ ಸೇರಿಕೊಂಡಿತ್ತು. ಆದರೆ ಅಂಥದೇನೂ ಆಗಲಿಲ್ಲ. ಬಹುಶಃ ಶೃಂಗೇರಿ ಕ್ಷೇತ್ರದ ಮೂರೂ ತಾಲ್ಲೂಕುಗಳಿಗೂ ಅನ್ವಯಿಸುವ ಒಂದು ಅತಿ ಮುಖ್ಯ ಬೇಡಿಕೆಯಾಗಿದ್ದ ಈ ವಿಚಾರದಲ್ಲೂ ಮುಖ್ಯಮಂತ್ರಿ ಪಾಟೀಲರು ಮನ್ನೇ ವಹಿಸಿದರು. !

ಏಳೆಂಟು ತಿಂಗಳಿಂದ ಸರ್ಕಾರದ ಎಲ್ಲ ಹಂತಗಳಲ್ಲೂ ಈ ಬಗ್ಗೆ ಮನವರಿಕೆ ಮಾಡಿಕೊಟ್ಟು, ಮುಖ್ಯ ಮಂತ್ರಿಯವರನ್ನು ಸಹ ಅಡಿಕೆ ಬೆಳೆಗಾರರ ನಿಯೋಗ ಖುದ್ದು ಭೇಟಿ ಮಾಡಿ ಸಮಸ್ಯೆಯನ್ನು ಎಳೆ ಎಳೆಯಾಗಿ ವಿವರಿಸಿದ್ದು, ಇನ್ನೇನು ಅವರು ಮನಸ್ಸು ಮಾಡುವುದು ಮಾತ್ರ ಬಾಕಿ ಎಂಬ ಹಂತದವರೆಗೆ ಬಂದಿದ್ದ ಈ ಬೇಡಿಕೆಗೆ, ಅವರು ಇಲ್ಲೀವರೆಗೆ ಬಂದಿದ್ದಾಗಲೇ ಪಾಕಲಾವ್ ಗತಿಯಾದರೆ ಇನ್ನು ಬೆಂಗಳೂರಲ್ಲಿ ಕೂತು 'ತಥಾಸ್ತು' ಅನ್ನುವುದುಂಟೆ? ಎಂಬ ನಿರಾಶಾವಾದ ಕವಿದಿದೆ.

ಈ ವಿಚಾರದಲ್ಲಿ ಅಡಿಕೆ ಬೆಳೆಗಾರರ ಪರವಾಗಿ ಪ್ರಾರಂಭದಿಂದ ಹೆಣಗುತ್ತಿರುವ ಶೃಂಗೇರಿಯ ಜಿ. ಪ. ಸದಸ್ಯ ರಾಮಪ್ಪಯ್ಯ ಹೇಳುತ್ತಾರೆ : ಈ ಸಲದ ಫಸಲು ಮಾತ್ರ ಹೋಗಿರುವುದಲ್ಲ ಸ್ವಾಮಿ. ಫಸಲು ಕೊಡುತ್ತಿದ್ದ ಮರಗಳೇ ಬಿದ್ದು ಹೋಗಿವೆ. ಚಿಕ್ಕಮಗಳೂರು ಜಿಲ್ಲೆಯಲ್ಲಿ ಮೂರೂವರೆ ಕೋಟಿ ರೂ., ಶೃಂಗೇರಿ ತಾಲ್ಲೂಕೊಂದರಲ್ಲೇ 97 ಲಕ್ಷ ರೂ ಗಳಷ್ಟು ನಷ್ಟವಾಗಿದೆ ಎಂದು ಜಿಲ್ಲಾಧಿಕಾರಿಗಳು ಸರ್ಕಾರಕ್ಕೆ ವರದಿ ಮಾಡಿದ್ದಾರೆ. ಬೆಳೆ ಶೇ. 60ಕ್ಕೂ ಕಮ್ಮಿ ಬಂದಿದೆ. ಅದೇ ವೇಳೆಗೆ (ಸಾಮಾನ್ಯ ಬೆಳೆಗಾರರ ಕೈಯಿಂದ ಮಾಲು ಪೂರ್ತಿ ಖಾಲಿಯಾಗುವವರೆಗೂ) ಅಡಿಕೆ ಧಾರಣೆ ಸಹ ಕುಸಿದು ಕುಳಿತು ಬೆಳೆಗಾರರಿಗೆ ಚೇತರಿಕೆಗೆ ಅವಕಾಶವೇ ಇಲ್ಲವಾಗಿದೆ.

ಪ್ರತಿ ಎಕರೆಯಲ್ಲಿ ಕಾಲಂಶದಿಂದ ಅರ್ಧಾಂಶದಷ್ಟು ಮರಗಳು ಹೋಗಿವೆ. ಪುನಃ ಅಡಿಕೆ ಸಸಿ ನೆಟ್ಟು ಬೆಳೆಸಿ ಫಸಲು ಪಡೆಯಲು ಕನಿಷ್ಠ 10 ವರ್ಷವಾದರೂ ಬೇಕು. ಇದಕ್ಕಾಗಿ ನಾವೇನು ಪರಿಹಾರ ಧನ ಕೇಳುತ್ತಿಲ್ಲ. ನಾವು ಕೇಳುತ್ತಿರುವುದು ಒಂದಿಷ್ಟು ಸುಲಭ ಕಂತಿನ ಸಾಲ—ಎಕರೆಗೆ 10 ಸಾವಿರ ಬಡ್ಡಿರಹಿತ ಸಾಲ ಕೊಡಿ; 10 ವರ್ಷದ ನಂತರ 10 ಕಂತುಗಳಲ್ಲಿ ವಸೂಲು ಮಾಡಿ ಎನ್ನುವುದೊಂದು. ಎರಡನೆಯದಾಗಿ, ರೈತರು ಈಗಿರುವ ಅಲ್ಪಾವಧಿ ಸಾಲಗಳನ್ನು ದೀರ್ಘಾವಧಿ ಸಾಲವಾಗಿ ಪರಿವರ್ತನೆ ಮಾಡಿ. ಇಷ್ಟಾದರೂ ಮಾಡಿದರೆ ರೈತರು ಎಷ್ಟೋ ಸುಧಾರಿಸಿಕೊಳ್ಳಲು ಸಾಧ್ಯವಾಗುತ್ತದೆ

(3ನೇ ಪುಟಕ್ಕೆ)

ಬಿನ್ನವತ್ತಳೆ ಓದಲಂತೂ ಇಲ್ಲ, ಓದಿದ್ದನ್ನು ಕಿವಿಯಿಂದ ಕೇಳಲೂ ಇಲ್ಲ!

ಶೃಂಗೇರಿ : ಮುಖ್ಯ ಮಂತ್ರಿಗಳಿಗೆ ನೀಡಿದ ಬಿನ್ನವತ್ತಳೆಯಲ್ಲಿ, ಮಠದಿಂದ ನಡೆಯುತ್ತಿರುವ ಬಾಲಕಿಯರ ಪ್ರೌಢಶಾಲೆಗಾಗಿ 6 ಎಕರೆ ಭೂಮಿ ಕೇಳಲಾಗಿತ್ತು. ಮುಖ್ಯ ಮಂತ್ರಿಗಳು ಅದನ್ನು ಯಾವುದಕ್ಕೆಂದು ತಲೆಗೆ ತೆಗೆದುಕೊಳ್ಳದೆ, "ಸಂಸ್ಕೃತ ವಿ. ವಿ. ಗೆ 6 ಎಕ್ರೆ ಕೊಡುವುದಾಗಿ" ಘೋಷಿಸಿ, ಚಪ್ಪಾಳೆ ಗಿಟ್ಟಿಸಿಬಿಟ್ಟರು.

ಹೋಗಲಿ, ಅನಂತರ ಮಾತನಾಡಿದ ನಾಯಕರುಗಳಲ್ಲಿ ಯಾರಾದರೂ ಅದನ್ನು ಸರಿಪಡಿಸಬಹುದಿತ್ತು. ಆದರೆ ಸಂಸತ್ ಸದಸ್ಯ ಡಿ. ಎಂ ಪುಟ್ಟೇಗೌಡ ಮುಖ್ಯ ಮಂತ್ರಿಗಳ ಭರವಸೆಯನ್ನು ಪ್ರಸ್ತಾಪಿಸಿ, "ವಿಶ್ವವಿದ್ಯಾಲಯಕ್ಕೆ ಬರೀ 6 ಎಕರೆ ಸಾಕಾಗಲಿಲ್ಲ. ಕಡೇ ಪಕ್ಷ ಎಂಟೋ ಹತ್ತೋ ಎಕರೆಯಾದರೂ ಮಂಜೂರು ಮಾಡಿದರೆ ಆಗುತ್ತಿತ್ತು" ಎಂದು ತಮ್ಮ ತಿಳುವಳಿಕೆ ಪ್ರದರ್ಶಿಸಿದರು.

ಇಲ್ಲಿ ಮುಖ್ಯವಾಗಿ, ಬೇಡಿಕೆಯಿದ್ದುದೇ ಬೇರೆ ಉದ್ದೇಶಕ್ಕೆ, ವಿ. ವಿ ಗಲ್ಲ. ವಿ.ವಿ ಗಾದರೆ 8–10 ಎಕರೆ ಹಾಗಿರಲಿ, 100 ಎಕರೆ–ಕಡೆಗೆ 50 ಎಕರೆಯಾದರೂ ಬೇಕೇ ಬೇಕು. ಈ ನಾಯಕರಿಗೆಲ್ಲ ಬಿನ್ನವತ್ತಳೆಯ ಪ್ರತಿಗಳನ್ನು ಹಂಚಲಾಗಿತ್ತು. ಅದರಲ್ಲಿ ಓದಿಯಾದರೂ ನೋಡಬಹುದಿತ್ತು; ಇಲ್ಲವೆ, ಬಿನ್ನವತ್ತಳೆ ಸಮರ್ಪಿಸುವಾಗ ಅದನ್ನು ಓದಿದ್ದನ್ನಾದರೂ ಕೇಳಬಹುದಿತ್ತು. ಎರಡೂ ಮಾಡದೆ, ಬೇಡಿಕೆ ಏನೆಂದೇ ಅರ್ಥ ಮಾಡಿಕೊಳ್ಳದೆ, ಮನಸ್ಸಿಗೆ ಬಂದದ್ದು ಮಾತಾಡಿಬಿಟ್ಟರು.

"ಎಲ್ಲ ಬೂಟಾಟಿಕೆ ! ಇಂದು ರಾಜಕಾರಣವೆಂದರೆ ಬರೀ ಇದೇ ಆಗಿ ಹೋಗಿದೆ ...."

—ಎಂದು ತಾಲ್ಲೂಕಿನ ಹಿರಿಯ ರಾಜಕಾರಣಿಯೊಬ್ಬರು (ಈಗ ಅಪ್ರಸ್ತುತವಾಗಿ ಕಾಣುವ 'ಗಾಂಧೀಜಿ ಸಂಸ್ಕೃತಿ'ಯವರು) 'ಮುಂಜಾವು' ಜೊತೆ ಅಲವತ್ತುಕೊಂಡರು.

ಮುಖ್ಯಮಂತ್ರಿಗಳ ಪತ್ರಿಕಾ ಗೋಷ್ಠಿ

ಮಿನಿ ವಿಧಾನ ಸೌಧ ಉದ್ಘಾಟನಾ ಕಾರ್ಯಕ್ರಮದ ನಂತರ ರಾತ್ರಿ ವೀರೇಂದ್ರ ಪಾಟೀಲರು ಪತ್ರಿಕಾ ಗೋಷ್ಠಿಯಲ್ಲಿ ಜಿಲ್ಲಾ ವರದಿಗಾರರ ವಿವಿಧ ಪ್ರಶ್ನೆಗಳಿಗೆ ಉತ್ತರಿಸಿದರು. ಜಿಲ್ಲೆಯ ಸಮಸ್ಯೆಗಳು, ಪರಿಸರ, ಆಡಳಿತ, ರಾಜ್ಯ ಮಂತ್ರಿ ಮಂಡಲ ವಿಸ್ತರಣೆ, ವೀರಪ್ಪನ್ ಬಂಧಿಸುವ ಪ್ರಶ್ನೆ, ಸ್ಥಳೀಯ ಸಂಘ–ಸಂಸ್ಥೆಗಳ ಚುನಾವಣೆ ನಿಗದಿತ ಏ. 29ಕ್ಕೆ ನಡೆಯುವ ಖಾತ್ರಿ– ಮುಂತಾಗಿ ಬಹು ವಿಧ ಪ್ರಶ್ನೆಗಳಿಗೆ ಉತ್ತರಿಸಿದರು. "ನಿಮ್ಮ ಸರ್ಕಾರದ ಕಾರ್ಯ ಚಟುವಟಿಕೆ ತೀರಾ ಸಪ್ಪೆ" ಎಂದುದಕ್ಕೆ ನಕ್ಕರು.

ಹೆಚ್ಚಿನ ಸ್ಥಳೀಯ ಸಮಸ್ಯೆಗಳ ಬಗ್ಗೆ 'ಗೊತ್ತಿಲ್ಲ–ತಿಳಿಯಬೇಕು', 'ಆ ಬಗ್ಗೆ ನೀವೇ ಹೇಳಿ' ಮುಂತಾಗಿ ಹೇಳುತ್ತಿದ್ದರು.

ಈ ಭಾಗದಲ್ಲಿ ಅವ್ಯಾಹತವಾಗಿ ನಡೆಯುವ ಗಂಧ ಕಳ್ಳ ಸಾಗಣೆಗೆ ಸಂಬಂಧಿಸಿದಂತೆ ಕೆಲ ವರ್ಷಗಳ ಹಿಂದೆ ಜಾಮೀನು ರಹಿತ ಬಂಧನದ ವಿರುದ್ಧ ನೀಡಲಾಗಿರುವ ತಡೆಯಾಜ್ಞೆಯನ್ನು ಸರ್ಕಾರ ತೆರವು ಮಾಡದಿರುವ ಬಗ್ಗೆ ಅವರ ಗಮನ ಸೆಳೆದಾಗ ಕೂಡಲೇ ಈ ಬಗ್ಗೆ ಕ್ರಮ ತೆಗೆದುಕೊಳ್ಳುವ ಭರವಸೆ ನೀಡಿದರು. ಅರಣ್ಯ ರಕ್ಷಕರಿಗೆ ವಿಶೇಷ ಆಯುಧಗಳನ್ನು ಒದಗಿಸುವ ಬಗ್ಗೆಯೂ ಪರಿಶೀಲಿಸುವ ಭರವಸೆಯಿತ್ತರು.

ಕಳೆದ ಎರಡು ವರ್ಷಗಳಿಂದ ಸ್ಥಳೀಯ ರೈತರ ಮನಸ್ಸಿಗೆ ಗ್ರಹಣ ಹಿಡಿಸಿರುವ ಕುದುರೆಮುಖ ರಾಷ್ಟ್ರೀಯ ಉದ್ಯಾನವನದ ಬಗ್ಗೆಯೂ "ನನಗೆ ಮಾಹಿತಿ ಇಲ್ಲ, ಯೋಚಿಸುತ್ತೇನೆ" ಎಂದು ಮುಖ್ಯ ಮಂತ್ರಿಗಳು

(3ನೇ ಪುಟಕ್ಕೆ)

ಓದುಗರ ಪತ್ರಗಳು

ಮಕ್ಕಳ ಸುಕೋಮಲ ಮನಸ್ಸುಗಳನ್ನು ಪಾಷಾಣಗೊಳಿಸುವ ಭೀಭತ್ಸ ದೃಶ್ಯ

ಪ್ರಿಯರೆ,

ಕೊಪ್ಪ ಕೆಳಪೇಟೆ ಹಿರಿಯ ಪ್ರಾಥಮಿಕ ಶಾಲೆಯ ಎದುರಿಗೇ ಮಾಂಸದ ಅಂಗಡಿಗಳಿವೆ. ಇಲ್ಲಿ ಆಳೆತ್ತರದಲ್ಲಿ ಮಾಂಸವಾಗಿ ತೂಗು ಹಾಕಿರುವ ಆಡು–ಕುರಿಗಳ ರಕ್ತಮಯವಾದ ಚರ್ಮ ಸುಲಿದ ಇಡೀ ಇಡೀ ದೇಹಗಳು; ಅವಕ್ಕೆ ಹಾರಾಡಿ ಮುತ್ತುವ ನೊಣಗಳು .... ದಿನ ನಿತ್ಯ ನೂರಾರು ಪುಟ್ಟ ಮಕ್ಕಳು ಈ ಭೀಭತ್ಸ ದೃಶ್ಯವನ್ನು ನೋಡುತ್ತಿರಬೇಕಾದ ಅನಿವಾರ್ಯತೆ.

ಒಳಗೆ 1 ರಿಂದ 7 ರ ವರೆಗಿನ ತರಗತಿಗಳಲ್ಲಿ ಮಹಾ ವೀರ, ಬುದ್ಧ, ಗಾಂಧೀಜಿಗಳು ಬೋಧಿಸಿದ ಅಹಿಂಸಾ ತತ್ವದ ಪಾಠಗಳಿರುತ್ತವೆ. ಆದರೆ "ಓದುವುದು ವೇದ, ಇಕ್ಕುವುದು ಗಾಳ" ಎಂಬಂತೆ, ಪುಟಾಣಿ ಮಕ್ಕಳ ಸುಕೋಮಲ ಮನಸ್ಸುಗಳನ್ನು ಪಾಷಾಣಗೊಳಿಸುವ ಹೊರಗಿನ ನಿತ್ಯ ದೃಶ್ಯ.

ಪುರಸಭೆಯವರು ಈ ಅಂಗಡಿಯನ್ನು ಪಟ್ಟಣದ ಹೊರಕ್ಕೆ, ಶಾಲೆಗಳಿಂದ ದೂರ, ಅರಣ್ಯ ಇಲಾಖೆಯ ಸಮೀಪ ಅಥವಾ ಅಂಥ ಎಲ್ಲಿಗಾದರೂ ಸ್ಥಳಾಂತರಿಸಲು ಈ ಶೈಕ್ಷಣಿಕ ವರ್ಷದ ಆರಂಭಕ್ಕೆ ಮೊದಲೇ ಕ್ರಮ ಕೈಗೊಳ್ಳುವರೆ?

—ಸುಮಿತ್ರ ಶಂಕರಪ್ಪ,
ಕೆಳಪೇಟೆ, ಕೊಪ್ಪ.

ಪದ್ಯದಂಗಣ

ಮತದಾರನಿಗೆ ಕಿವಿ ಮಾತು?!

ಏ! ಬಡ ಕುರಿಯೆ
ನೀ ಬದಿ ಸರಿಯೆ
ತಡೆ, ನಿನಗೇನು ಕಸುಬಿಲ್ಲಿ–
(ರಾಜ್ಯ–ರಾಷ್ಟ್ರ) ರಾಜಕಾರಣದ
ಮಹತ್ಕಾರ್ಯದಲ್ಲಿ?
ನೀ ಚಿಂತಿಸಬೇಡ, ಅವಕಾಶವಿದೆ ನಿನಗೂ....
ಐದು ವರ್ಷಕ್ಕೊಮ್ಮೆ ಬರುವುದು
ಭಾಗ್ಯ ನಿನ್ನ ಪಾಲಿಗೂ
ಆಗ ನೀ ಮನ ಬಂದದ್ದಕ್ಕೆ ಗುದ್ದಿ ಬಿಡು
ಮುಂದೈ ನಿಶ್ಚಿಂತೆಯಲಿ ಇದ್ದು ಬಿಡು
‖ಏ ಬಡ ಕುರಿಯೆ‖
ನಾಯಕರ ನಾಜೂಕ ತಿಳಿವ ಹಂಬಲವೇಕೆ?
ವರ್ತಮಾನವ ತಿಳಿವ ಗೊಂದಲ ನಿನಗೇಕೆ?
ಅವರು ಆಳುವರಲ್ಲಿ
ನೀ ಸುಮ್ಮನೆ ತಲೆಯಾಡಿಸು ಇಲ್ಲಿ
ಹೌದೆಂದರೆ ಹೌದ್ಹೌದನ್ನು !
ಅವರಲ್ಲವೆಂದರೆ ನೀ ಸಲ್ಲದೆನ್ನು
ನಿನ್ನದೇ ರಾಷ್ಟ್ರ ನಿನ್ನದೆ ಸರ್ಕಾರ,
ನಿನ್ನದೆ ಎಲ್ಲ ನಿನ್ನದೇ ಎಲ್ಲ ಇಲ್ಲಿ!
‖ಏ ಬಡ ಕುರಿಯೆ ‖
...ಗೆ ರಾಜ್ಯ ಬಡ ಕುರಿಗಳ ಸ್ವರಾಜ್ಯ
...ದ್ಯವಾದರೆ ಗುದ್ದಾಡು ಕಚ್ಚಾಡು
ಹೊಡೆದಾಡು ಬಡಿದಾಡು
ನಿನ್ನೊಬ್ಬರ ತುಳಿದು ನೀ
ಬದುಕುವ ದಾರಿ ನೋಡು!
‖ಏ ಬಡ ಕುರಿಯೆ ‖

— ಟಿ ಎಲ್. ಉಮೇಶ್,
ತೆಕ್ಕೂರು, ಶೃಂಗೇರಿ.

"ಚಾಣಕ್ಯನ ಪಾತ್ರವನ್ನೇ ಮಾಡಬೇಕೆಂಬ ಹಟವಿರಲಿಲ್ಲ"

ಪ್ರಿಯ ಸಂಪಾದಕರೆ,

ದಿನಾಂಕ. 15-4-90 ರ ಸಂಚಿಕೆಯಲ್ಲಿ, ನಮ್ಮ ವೀರಗಲ್ಲುಮಕ್ಕಿ ಶಾಲಾ ವಾರ್ಷಿಕೋತ್ಸವದ ಅಂಗವಾಗಿ ಜರುಗಿದ ಸಾಂಸ್ಕೃತಿಕ ಕಾರ್ಯಕ್ರಮದ ಬಗ್ಗೆ, ತಾವು ಸವಿವರ ಲೇಖನ ಬರೆದಿರುವುದು ಸಂತೋಷಕರ. ಉದಯೋನ್ಮುಖರಿಗೆ ಇಂತಹ ವಿಮರ್ಶೆ, ಪ್ರೋತ್ಸಾಹದ ಮಾತುಗಳು ನಿಜಕ್ಕೂ ಸಹಕಾರಿ. ಧನ್ಯವಾದಗಳು

ಈ ಲೇಖನದಲ್ಲಿ, ನಾನು 'ಚಾಣಕ್ಯ' ಪಾತ್ರವನ್ನು ಬಹಳ ಆಸೆಯಿಂದ ಆಯ್ದುಕೊಂಡಿದ್ದೇನೆ. ನಿರ್ದೇಶಕರ ತೀರ್ಮಾನದಂತೆ ಪಾತ್ರ ಹಂಚಿಕೆಯಾಗಿಲ್ಲ, ನನ್ನನ್ನು ನಿರಾಶೆಗೊಳಿಸಲು ತಂಡದವರಿಗೆ ಮನಸ್ಸಿಲ್ಲದೆ ಚಾಣಕ್ಯ ಪಾತ್ರವನ್ನು ನನಗೆ ಕೊಟ್ಟರು–ಎಂತಲೂ, "ಪ್ರತಿಭೆ ಹೊರ ಚೆಲ್ಲುವ ಆಸೆ ಇರುವವನಿಗೆ ಎಷ್ಟು ಚಿಕ್ಕ ಪಾತ್ರವಾದರೂ ಸಾಕು ಎಂಬುದಕ್ಕೆ ಸೆಲ್ಯೂಕಸ್ ಪಾತ್ರವೇ ಉದಾಹರಣೆ" ಎಂತಲೂ, ಪಾತ್ರ ಹಂಚಿಕೆಯಲ್ಲಿ ನಿರ್ದೇಶಕನದೇ ಅಂತಿಮ ತೀರ್ಮಾನವಾಗಿರಬೇಕೆಂತಲೂ ಬರೆದಿದ್ದೀರಷ್ಟೆ.

ನಿರ್ದೇಶಕರಾದ ಪದ್ಮನಾಭರವರು ಬರುವ ಮೊದಲೇ ಪಾತ್ರ ಹಂಚಿಕೆಯಾಗಿದ್ದರೂ, ನಂತರ ಅವರ ತೀರ್ಮಾನದಂತೆಯೇ ಪಾತ್ರಗಳಲ್ಲಿ ಕೆಲವನ್ನು ಅದಲು ಬದಲು ಮಾಡಲಾಯಿತು. ಅವರ ಅಂತಿಮ ತೀರ್ಮಾನದಂತೆಯೇ (ನಾನು ನನ್ನ ಪಾತ್ರವನ್ನು ಬದಲಿಸಲು ಕೇಳಿಕೊಂಡರೂ ನಿರ್ದೇಶಕರು ಅದೇ ಪಾತ್ರವನ್ನು ನನಗೆ ನಿರ್ವಹಿಸಲು ತಿಳಿಸಿದ್ದರಿಂದ) ನಾನು ಆ ಪಾತ್ರವನ್ನು ಮಾಡಿದ್ದೇನೆ. ನನಗೇನೂ ಅದೇ ಪಾತ್ರವನ್ನೇ ಮಾಡಬೇಕೆಂಬ ಛಲ ಇರಲಿಲ್ಲ. ಆದ್ದರಿಂದ ನನ್ನನ್ನು ನಿರಾಶೆಗೊಳಿಸಬಾರದೆಂಬ ಕಾರಣದಿಂದಲೆ, ನಮ್ಮ ತಂಡದವರು ಆ ಪಾತ್ರ ನೀಡಿದರೆಂಬುದು ನಿಜವಲ್ಲ.

ನೀವು, "ಪ್ರತಿಭೆ, ಹೊರ ಚೆಲ್ಲಲು ಯಾವ ಪಾತ್ರವೂ ಸಾಕು" ಎಂದ ಹಾಗೆ, ನಾನೂ ಸಹ ಯಾವ ಪಾತ್ರಕ್ಕೂ ಸಿದ್ಧನಿದ್ದೆ. (ಅಥವಾ ಯಾವ ಪಾತ್ರವನ್ನು ಮಾಡದೇ ಇರಲೂ ಸಿದ್ಧನಿದ್ದೆ).

ಆದ್ದರಿಂದ, ನನ್ನ ಪಾತ್ರದ ಆಯ್ಕೆಯಲ್ಲಿ ನಿರ್ದೇಶಕರ ತೀರ್ಮಾನಕ್ಕೆ ಅವಕಾಶವಿಲ್ಲದೆ ಹೋಯಿತೆಂಬುದು ನಿಜವಲ್ಲ. ಇದರಿಂದ ನನ್ನ ಮನಸ್ಸಿಗೆ ನೋವಾಗಿದೆ.

—ಎ. ಜಿ. ಅನಂತ್,
ರಂಗನಕೊಡಿಗೆ– ಹೇರೂರು.

(ಅನಂತ್‌ರ ವಾಕ್ಯವನ್ನು ನಿರ್ದೇಶಕರ ಸೂಚನೆಗೆ ತಕ್ಕಂತೆ ಬದಲಿಸಲು ತಂಡದವರು ಒಪ್ಪದೆ ಇದ್ದುದು ಸೌಜನ್ಯವಿರಬಹುದಾದರೂ, ಅದೊಂದು ಎಲ್ಲರೂ ಒಟ್ಟಾಗಿ ಮಾಡಿದ ತಪ್ಪು ಎಂಬುದೂ ನಿಜ ಎಂದಂತಾಯಿತು. ಪಾತ್ರ ಹಂಚಿಕೆಯ ಈ ಸೂಕ್ಷ್ಮ ಎಲ್ಲ ಕಡೆಗಳ ಸಾಂಸ್ಕೃತಿಕ ತಂಡಗಳಿಗೂ ಮೇಲ್ಪಂಕ್ತಿಯಾಗುವುದು ಒಳಿತು. —ಸಂ.)

'ನೀನಾಸಂ'ರನ್ನು ಅನುಸರಿಸಬೇಕೆಂದಲ್ಲ....

ಪ್ರಿಯರೆ,

ನನ್ನ ಲೇಖನಕ್ಕೆ ರಮೇಶ್ ಬೇಗಾರ್‌ರ ಪ್ರತಿಕ್ರಿಯೆ (22-4-1990) ಗಮನಿಸಿದೆ ಅವರ ಎಲ್ಲ ಪ್ರಶ್ನೆಗಳಿಗೆ ಉತ್ತರ ದೀರ್ಘವಾಗಬಹುದಾದ್ದರಿಂದ ಈ ಕೆಲವು ಅಂಶಗಳನ್ನು ಮಾತ್ರ ಇಲ್ಲಿ ಕಾಣಿಸುತ್ತೇನೆ.

1. ನೀನಾಸಂರೊಡನೆ ಯಾರನ್ನೂ ಹೋಲಿಸುವುದಾಗಲಿ, ಎಲ್ಲರೂ ಅವರನ್ನೇ ಅನುಸರಿಸಬೇಕೆಂಬ ಇರಾದೆಯಾಗಲಿ ನನ್ನದಲ್ಲ. ನೋಡಿದ್ದರಿಂದ, ಕೇಳಿದ್ದರಿಂದ, ಓದಿದ್ದರಿಂದ ಕದಿಯುವುದು ಕೃತಿ ಚೌರ್ಯ. ಆದರೆ ಅದರಿಂದ ಕಲಿಯುವುದು ಬೆಳವಣಿಗೆಗೆ ಅಗತ್ಯ.

2. ತಾಂತ್ರಿಕವಾಗಿ ಸಂಕೀರ್ಣವಾಗಿರುವ ನಾಟಕದ ಕುರಿತು ಅವರ ಮಾತನ್ನು ಗಮನಿಸಿ ಈ ಪ್ರಶ್ನೆ : ಅಸಂಬದ್ಧ ಶೈಲಿಯ 'ಅಂಬಿ' ನಾಟಕ ಯಾರಿಗಾಗಿ ?

3. ಜನರ ನಾಡಿ ಮಿಡಿತ, ಆಸಕ್ತಿ, ಗಮನಿಸುವುದು ಅನಿವಾರ್ಯವಾದರೂ ಜನರ ಕಳಪೆ ಅಭಿರುಚಿಗೆ, ಆಸೆಗೆ ಮಣಿಯುವುದು ಕಲಾವಿದನ ಪೊಳ್ಳುತನದ ಪರಮಾವಧಿ

4 ಉತ್ತಮ' ನಾಟಕ ಪ್ರದರ್ಶನಕ್ಕೆ ಆರ್ಥಿಕ ಸಮಸ್ಯೆ. ಅದು ನನಗೂ ಗೊತ್ತು. ಆದರೆ ಜೆ ಸಿ.ಬಿ.ಎಂ. ಕಾಲೇಜಿನ ಬೆಳ್ಳಿ ಹಬ್ಬದಲ್ಲಿ ಹಳೆ ವಿದ್ಯಾರ್ಥಿಗಳ ಕಾರ್ಯಕ್ರಮದಲ್ಲಿ 'ಅಂಬಿ'ಯಂಥ ಕೆಟ್ಟ ನಾಟಕದ ಬದಲಿಗೆ ಉತ್ತಮ ನಾಟಕವೊಂದನ್ನು ಆಡಿಸಬಹುದಿತ್ತು. ಆಗೇನು ಆರ್ಥಿಕ ಸಮಸ್ಯೆ ಇತ್ತು ?

5. ಕಲಾರಂಗದ ಎಷ್ಟು ನಾಟಕ ನೋಡಿದ್ದೀರಿ ? ಎಂದಿದ್ದಾರೆ. ಅವರ 'ಅಧಿಕ ಪ್ರಸಂಗ' ನೋಡಿದ್ದೇನೆ ಮತ್ತು ಕೇಳಿದ್ದೇನೆ. 'ನಿರ್ಮಲಾ', 'ಅಂಬಿ', ಮೊದಲಾದ ನಾಟಕ ನೋಡಿ ವ್ಯಥೆ ಪಟ್ಟಿದ್ದೇನೆ! ('ಪರಿವ್ರಾಜನ' ಪರವಾಗಿಲ್ಲ)

ಕೊನೆಯದಾಗಿ ಒಂದು ಮಾತು: ಜನಪ್ರಿಯವಾದುವೆಲ್ಲವೂ ಜನಪರವೇನಲ್ಲ. 'ಹಿತ್ತಲ ಗಿಡ ಮದ್ದಲ್ಲ' ಎನ್ನುವಂತೆ ನಮ್ಮಲ್ಲಿರುವ ಪ್ರತಿಭಾವಂತರನ್ನು ಅಲಕ್ಷಿಸುವುದು ಸರಿಯಲ್ಲ. ಆದರೆ 'ಹೆತ್ತವರಿಗೆ ಹೆಗ್ಗಣ ಮುದ್ದು' ಎನ್ನುವಂತೆ ನಮ್ಮಲ್ಲಿರುವ ಪ್ರತಿಭಾವಂತರನ್ನು ಅಗತ್ಯಕ್ಕಿಂತ ಹೆಚ್ಚು ಹೊಗಳಿ ಹೊನ್ನ ಶೂಲಕ್ಕೇರಿಸುವುದೂ ಪ್ರತಿಭಾವಂತರೊಳಗಿನ ಕಲೆಗಾರನ ಪರೋಕ್ಷ ಕೊಲೆಯಲ್ಲವೆ ? ಯಾರ ಕೃತಿಗಳನ್ನೂ ಪೂರ್ವಾಗ್ರಹದಿಂದ ನೋಡುವ ಚಟ ನನಗಿಲ್ಲ. ರಮೇಶ್‌ರ ಪ್ರತಿಭೆ ಉತ್ತಮವಾದದ್ದನ್ನು ಸೃಷ್ಟಿಸಿದರೆ ಹೆಮ್ಮೆ ಪಡಲಾರದ ಹೃದಯಹೀನತೆ ನನಗಿಲ್ಲವೆಂದು ವಿನಮ್ರನಾಗಿ ತಿಳಿಸುತ್ತೇನೆ.

'ಶೃಂಗ', ಶೃಂಗೇರಿ.

ಮುಖ್ಯಮಂತ್ರಿಗಳ ಪತ್ರಿಕಾ ಗೋಷ್ಠಿ

(2ನೇ ಪುಟದಿಂದ)

ಹೇಳಿದಾಗ, 2 ವರ್ಷದ ಹಿಂದೆಯೇ ಅನುಷ್ಠಾನಕ್ಕೆ ಬಂದಿರುವ ಯೋಜನೆ ಬಗ್ಗೆ ತನಗೆ ಗೊತ್ತಿಲ್ಲವೆಂದು ಸರ್ಕಾರವೇ ಹೇಳಿದರೆ ಸಂತ್ರಸ್ತರು ಯಾರನ್ನು ಕೇಳಬೇಕು ಎಂಬ 'ಮುಂಜಾವು' ಪ್ರಶ್ನೆಗೆ, "ಖಂಡಿತ ತಿಳಿದು ಹೇಳುತ್ತೇನೆ" ಎಂದು ಖಚಿತ ಭರವಸೆ.

ಸಾಲ ಮಾಡುವ ರೈತರಿಗೆ ಸ್ಟ್ಯಾಂಪ್ ಶುಲ್ಕ ಹೆಚ್ಚಿಸಿರುವ ಸಮಸ್ಯೆಯ ಬಗ್ಗೆ 'ಮುಂಜಾವು' ಪ್ರಸ್ತಾಪಿಸಿದಾಗ ಜಿ. ಪ. ಅಧ್ಯಕ್ಷರೂ ಅದಕ್ಕೆ ಧ್ವನಿಗೂಡಿಸಿದರು. ಹಿಂದೆ 10 ಸಾವಿರ ರೂ. ವರೆಗಿನ ಮೊಬಲಗಿಗೆ ಪೂರ್ತಿ ವಿನಾಯ್ತಿ, ಅನಂತರ 50 ಸಾವಿರದವರೆಗೆ ಶೇ. 5 ಶುಲ್ಕ ಇದ್ದುದನ್ನು 1-4-90ರಿಂದ ರಿಯಾಯ್ತಿ ರದ್ದು ಮಾಡಿ, ಶೇ. 10ಕ್ಕೇರಿಸಲಾಗಿದೆ. ಹಿಂದಿನ ಸರ್ಕಾರ ನೀಡಿದ್ದ ಶೇ. 7 ರ ಮೇಲಿನ ಬಡ್ಡಿ ರಿಯಾಯ್ತಿಯನ್ನೂ ನಿಮ್ಮ ಸರ್ಕಾರ ತೆಗೆದು ಹಾಕಿ, ಒಟ್ಟಿನಲ್ಲಿ ರೈತರನ್ನು ತೀರಾ ಸಂಕಷ್ಟಕ್ಕೀಡು ಮಾಡಿದೆ ಈವರೆಗೆ ರೈತರು ಧೈರ್ಯವಾಗಿ ಭೂ ಅಭಿವೃದ್ಧಿ ಬ್ಯಾಂಕ್‌ಗಳಲ್ಲೇ ಹೆಚ್ಚು ಮೊತ್ತದ ಸಾಲ ಮಾಡುತ್ತಿದ್ದು, ಇನ್ನು ಮುಂದೆ ಹೆಚ್ಚಾಗಿ ಮಂಡಿಗಳನ್ನೇ ಅವಲಂಬಿಸಬೇಕಾದ ಪರಿಸ್ಥಿತಿ ತಂದಿದ್ದೀರಿ ಎಂದಾಗ, ಕೂಡಲೇ ಈ ಬಗ್ಗೆ ಕ್ರಮ ತೆಗೆದುಕೊಳ್ಳುವುದಾಗಿ ಆಶ್ವಾಸನೆಯಿತ್ತರು

ಸಂತ್ರಸ್ತ ಅಡಿಕೆ ಬೆಳೆಗಾರರ ಅಸಹಕಾರ ಚಳುವಳಿ

(2ನೇ ಪುಟದಿಂದ)

ಎಕರೆಗೆ 10 ಸಾವಿರ ಕೇಳಿದ್ದೇವೆ ಬೇಡ, ಕಮ್ಮಿ ಮಾಡಿ. ಐದು ಸಾವಿರ ಕೊಡಿ ; ಅಷ್ಟೂ ಇಲ್ಲವೋ, ಇನ್ನೂ 1 ಸಾವಿರ ಕಡಿಮೆ ಕೊಡಿ. ಅಂತೂ ರೈತರ ಚೇತರಿಕೆ ಯತ್ನಕ್ಕೆ ಒಂದಿಷ್ಟಾದರೂ ನೆರವಿನ ಹಸ್ತ ನೀಡಿ.

ಇಷ್ಟು ಸಮಂಜಸವಾದ, ನ್ಯಾಯಯುತವಾದ ಬೇಡಿಕೆಗೂ ಸರ್ಕಾರದ ಬಳಿ ಸಹಾನುಭೂತಿ ಇಲ್ಲವೆಂದ ಮೇಲೆ ಏನು ಮಾಡಬೇಕು? ಅದಕ್ಕೆ ಫೆ 25 ರಂದು ಶೃಂಗೇರಿಯಲ್ಲಿ ಅಡಿಕೆ ಬೆಳೆಗಾರರ ಬೃಹತ್ ಸಭೆ ನಡೆದಾಗ, ಈ ರೀತಿಯ ಸಾಲ ಸೌಕರ್ಯವನ್ನು ಸರ್ಕಾರ ಒದಗಿಸುವವರೆಗೆ ಬ್ಯಾಂಕ್ ಮತ್ತು ಸಹಕಾರಿ ಸಾಲಗಳನ್ನು ಕಟ್ಟಬಾರದು ಎಂದು ತೀರ್ಮಾನಿಸಿದ್ದೇವೆ.

ಇದೀಗ ನಾನು ಅದನ್ನೇ ಮತ್ತೊಮ್ಮೆ ಎಲ್ಲ ಬೆಳೆಗಾರರಿಗೆ ಕರೆ ಕೊಡುತ್ತೇನೆ-ಧೈರ್ಯವಾಗಿ ನಿಲ್ಲಿ ಎಂದು. ಅದೇ ವೇಳೆ ಸರ್ಕಾರಿ, ಸಹಕಾರಿ ಮತ್ತು ಬ್ಯಾಂಕ್ ವಸೂಲಾತಿ ಅಧಿಕಾರಿಗಳಿಗೂ ರೈತರ ಬಳಿಗೆ ಬಾರದಂತೆ ಎಚ್ಚರಿಕೆ ನೀಡುತ್ತಿದ್ದೇನೆ. ಇದು ಸಂತ್ರಸ್ತ ರೈತರ ಅಸಹಕಾರ ಚಳುವಳಿ. ಇದನ್ನು ಮುರಿಯುತ್ತೇನೆಂಬ ದಾರ್ಷ್ಟ್ಯ ಬೇಡ. ರೈತರ ಸಂಕಷ್ಟಕ್ಕಾಗದ ಸರ್ಕಾರ ನಮಗೇತಕ್ಕೆ?

—ಹಳೇ ಸುಳಿ ರಾಮಪ್ಪಯ್ಯ ನಿಜವಾಗಿಯೂ ಗಂಭೀರವಾಗಿಯೇ ಹೇಳುತ್ತಿದ್ದಾರೆಂದು ತೋರುತ್ತದೆ.

ಸಭೆಯಲ್ಲಿ ಅಧಿಕಾರಿಗಳ ಬಗ್ಗೆ ಸಾಮೂಹಿಕ ಅಸಮಾಧಾನ

(2ನೇ ಪುಟದಿಂದ)

ಈ ಎಳೆಯನ್ನು ಮತ್ತಷ್ಟು ಮುಂದ ಕ್ಕೊಯ್ದವರು ರಾಜ್ಯಸಭಾ ಸದಸ್ಯೆ ಡಿ. ಕೆ. ತಾರಾದೇವಿ. ಸರ್ವೆ ಇಲಾಖೆ ಎಂಬುದು ಸಾಮಾನ್ಯ ರೈತರ ಜೀವ ಹಿಂಡಲಿಕ್ಕಾಗಿಯೇ ಇರುವುದೆಂದು ಆಪಾದಿಸಿದ ಅವರು, ಈ ಇಲಾಖೆಯವರು ಹಣ ಕೊಟ್ಟವರಿಗೆ ನಕಾಶೆಗಳನ್ನೇ ಬದಲಿಸಿಕೊಟ್ಟಂಥ ಪ್ರಕರಣಗಳು ತನ್ನ ಗಮನಕ್ಕೆ ಬಂದಿವೆ ಎಂದರು.

ಮಲೆನಾಡಿನ ಪರಿಸರಕ್ಕೆ ಹೊಂದದ ರಾಷ್ಟ್ರೀಯ ಯೋಜನೆಗಳಿಂದ ತೊಂದರೆಯಾಗುತ್ತಿದ್ದು, ಮಲೆನಾಡಿನ ಅಭಿವೃದ್ಧಿಗೆ ಪ್ರತ್ಯೇಕವಾಗಿ 'ಮಲೆನಾಡು ಅಭಿವೃದ್ಧಿ ಮಂಡಳಿ' ಮತ್ತು ಯೋಜನೆಗಳನ್ನು ಮಾಡುವಂತೆ ಒತ್ತಾಯಿಸಿದರು.

ಇದಕ್ಕೆ ಮೊದಲು ಮಾತನಾಡಿದ ಲೋಕಸಭಾ ಸದಸ್ಯ ಡಿ. ಎಂ. ಪುಟ್ಟೇಗೌಡ, ಜಪಾನ್ ಸಹಯೋಗದೊಂದಿಗೆ ರಾಜ್ಯ ಸರ್ಕಾರ ವ್ಯಯಿಸಲಿರುವ 150 ಕೋಟಿ ರೂ.ಗಳಲ್ಲಿ ಪ್ರವಾಸಿ ಕೇಂದ್ರವಾದ ಶೃಂಗೇರಿಗೆ ಹೆಚ್ಚು ಹಣ ವಿನಿಯೋಗವಾಗಬೇಕು ಎಂದು ಮುಖ್ಯ ಮಂತ್ರಿಗಳನ್ನು ಒತ್ತಾಯಿಸಿದರು.

ಜನತಾ ಮನೆಗಳನ್ನು ಹೆಚ್ಚಿಸಬೇಕು ಮತ್ತು ರೈತರಿಗೆ ಮನೆ ದಳ ಮಂಜೂರು ಮಾಡಬೇಕೆಂದು ಒತ್ತಾಯಿಸಿದ ಅವರು, 2-3 ಎಕರೆ ಬಗರ್ ಹುಕುಂ ಸಾಗುವಳಿ ಮಾಡಿರುವ ಭೂ ರಹಿತರಿಗೆ ಜಮೀನು ಮಂಜೂರು ಮಾಡುವ ಕೆಲಸ ಕೂಡಲೇ ಆಗಬೇಕೆಂದರು.

ಅಧಿಕಾರಿಗಳ, ಇಲಾಖೆಗಳ ವಿರುದ್ಧದ ಅಸಮಾಧಾನದ ಎಳೆಯನ್ನು ತುದಿ ಮುಟ್ಟಿಸಿದವರು ಜಿ. ಪ. ಅಧ್ಯಕ್ಷ ಬಿ. ಎಲ್. ರಾಮದಾಸ್. ಟ್ರೆಜರಿ ಇಲಾಖೆಯನ್ನು ತರಾಟೆಗೆ ತೆಗೆದುಕೊಂಡ ಅವರು, ಹಿಂದೆ ಈ ಇಲಾಖೆ ಕಂದಾಯ ಇಲಾಖೆಯ ಅಧೀನದಲ್ಲಿದ್ದಾಗ ಅದಕ್ಕೆ 'ಹೇಳುವವರು-ಕೇಳುವವರು' ಯಾರಾದರೂ ಇದ್ದರು. ಆದರೆ ಅದು ಸ್ವತಂತ್ರವಾದ ನಂತರ ಈಗ ಯಾರ ಮಾತಿಗೂ ಬೆಲೆ ಕೊಡದೆ ಬೇಕಾಬಿಟ್ಟಿಯಾಗಿದೆ ಎಂದು ಕೆಂಡ ಕಾರಿದರು. ಜಿಲ್ಲಾ ಪರಿಷತ್ತಿನ ಹಲವು ಯೋಜನೆಗಳಿಗೆ ಹಣ ಬಿಡುಗಡೆಯ ಸಂಬಂಧವಾಗಿ ಈ ಇಲಾಖೆ ನಡೆದುಕೊಂಡ ರೀತಿಯನ್ನು ಅವರು ಉದಹರಿಸಿದರು.

ಜಿ. ಪ. ಸದಸ್ಯ ಕೆ. ಎ. ರಾಮಪ್ಪಯ್ಯ ಸ್ಥಳೀಯ ರೈತರ ಸಮಸ್ಯೆಗಳನ್ನು ವಿವರಿಸಿ, ಕಳೆದ ವರ್ಷದ ಬಿರುಗಾಳಿಯಿಂದ ನಷ್ಟಕ್ಕೊಳಗಾದ ರೈತರಿಗೆ ವಿಶೇಷ ನೆರವು ನೀಡುವಂತೆ ಮುಖ್ಯ ಮಂತ್ರಿಗಳನ್ನು ಕೇಳಿಕೊಂಡರು.

ಅಧ್ಯಕ್ಷತೆ ವಹಿಸಿದ್ದ ಶಾಸಕ ಶಾಮಣ್ಣ, ರಾಷ್ಟ್ರ ಮಟ್ಟದಲ್ಲಿ ಗುರುತಿಸಲ್ಪಡುವ ಶೃಂಗೇರಿಯ ಜನರು ಶಾಂತ ಸ್ವಭಾವದವರು. ತಮಗೆ ತೀರಾ ಅನಿವಾರ್ಯವಾದದನ್ನು ಸಹ ಕೇವಲ ವಿನಯದಿಂದ ಕೇಳುವವರು. ಇದನ್ನು ಮನಗಂಡು, ಇಲ್ಲಿಯ ಜನರ ಸಮಸ್ಯೆಗಳನ್ನು ಪರಿಹರಿಸಬೇಕೆಂದರು.

ತುಂಡು ಭೂಮಿ ಕಾಲ್ದಿ ಮಜ. ಮಾಡಬೇಕು ಹಾಗೂ ಈ ಕ್ಷೇತ್ರದ ಅಭಿವೃದ್ಧಿಗೆ ಹೆಚ್ಚು ಒತ್ತುಕೊಡಬೇಕು ಎಂದು ಅವರು ಮನವಿ ಮಾಡಿದರು.


ಕ್ಷೇತ್ರದ ಪರವಾಗಿ 10 ಬೇಡಿಕೆಗಳ ಬಿನ್ನವತ್ತಳೆಯನ್ನು ಮುಖ್ಯಮಂತ್ರಿಗಳಿಗೆ ಸಲ್ಲಿಸಲಾಯಿತು. ಆದರೆ ಅದರಲ್ಲಿ ಕ್ಷೇತ್ರದ ಎಷ್ಟೋ ತುರ್ತಿನ ಬೇಡಿಕೆಗಳು ಸೇರಿರಲಿಲ್ಲ. ಅದರಲ್ಲಿದ್ದ ಹಲವು ಬೇಡಿಕೆಗಳು ಪ್ರಾಮುಖ್ಯ ಅನ್ನಿಸುವಂತಿರಲಿಲ್ಲ (ಕೆಲವು ಬೇಡಿಕೆಗಳ ಬಗ್ಗೆ ನಮ್ಮ ಹಿಂದಿನ ಸಂಚಿಕೆಯಲ್ಲಿ ಓದುಗರು ಪ್ರಸ್ತಾಪಿಸಿದ್ದಾರೆ. —ಸಂ.)

ಆದರೆ ಈ ಯಾವ ಬೇಡಿಕೆಗಳ ಬಗ್ಗೆಯೂ ಮುಖ್ಯ ಮಂತ್ರಿಗಳು ಖಚಿತ ಆಶ್ವಾಸನೆಯನ್ನೇನೂ ಕೊಡದೆ ಹೋದುದು ಜನರಿಗೆ ಸ್ವಲ್ಪ ಮಟ್ಟಿಗೆ ನಿರೀಕ್ಷಿತವಾಗಿತ್ತಾದರೂ ಪೂರ್ತಿ ನಿರಾಶೆ ಹುಟ್ಟಿಸದಿರಲಿಲ್ಲ.

ಅಡಿಕೆ ಧಾರಣೆ


ಶಿವಮೊಗ್ಗ	26-4-1990
ಸರಕು	3860-4252
ಬೆಟ್ಟೆ	2810-3269
ಗೊರಬಲು	1836-2140
ಸಾಗರ	26.4.1990
ಇಡಿ	2731
ಚಾಲಿ	2592
ಆಪಿ	3219-3505
ಸಿಪ್ಪೆ ಗೋಟು	1347











ಸಂಪಾದಕ, ಮುದ್ರಕ ಮತ್ತು ಪ್ರಕಾಶಕ : ಸಿರಿಮನೆ ನಾಗರಾಜ್, ಅಚ್ಚು : ದೀಟಿಗೆ ಅಚ್ಚುಕೂಟ, ಕೊಪ್ಪ